ಲಭ್ಯವಾದಲ್ಲಿ ಮಾತ್ರ ಇಂತಹ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಪರಿಶೀಲಿಸಲಾಗುವುದು.

ಇ ಸದರಿ ಹಳ್ಳದ ಸುಧಾರಣೆ ಮಾಡಿ, ಪ್ರಕೃತಿ ವಿಕೋಪದಿಂದ ಆಗುವ ಅನಾಹುತವನ್ನು ತಡೆಯಲು ಸರ್ಕಾರ ಕ್ರಮ ಕೈಗೊಳ್ಳುವುದೇ?

11ನೇ ಪಂಚವಾರ್ಷಿಕ ಯೋಜನೆಯಲ್ಲಿ ಪ್ರವಾಹ ನಿರ್ವಹಣೆ ಕಾರ್ಯಕ್ರಮದಡಿ ನದಿ ನಿರ್ವಹಣೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಯಡಿ ಕೇಂದ್ರ ಸರ್ಕಾರದ ನೆರವಿನೊಂದಿಗೆ ನದಿ ಮತ್ತು ಹಳ್ಳದ ದಂಡಗಳನ್ನು ಹಾಗೂ ಕೃಷಿ ಭೂಮಿಗಳನ್ನು ರಕ್ಷಿಸುವ ಕಾಮಗಾರಿಗಳನ್ನು ಪ್ರಸ್ತಾಪಿಸಲಾಗುತ್ತಿದೆ. ಕೇಂದ್ರ ಸರ್ಕಾರದ ಅನುಮೋದನೆ ದೊರೆತಲ್ಲಿ ಈ ಕಾಮಗಾರಿಗಳನ್ನು ಜಾರಿಗೊಳಿಸಲಾಗುವುದು.

1. ಚುಕ್ಕೆ ಗುರುತಿಲ್ಲದ ಪ್ರಸಂ.	**:**	**(302)128**
2. ಸದಸ್ಯರ ಹೆಸರು	**:**	**ಡಾ: ಸುಧಾಕರ್ ಎಂ.ಸಿ.**
3. ಉತ್ತರಿಸುವ ಸಚಿವರು	**:**	**(ಶ್ರೀ ಗೋವಿಂದ ಎಂ.ಕಾರಜೋಳ) ಮಾನ್ಯ ಸಣ್ಣ ನೀರಾವರಿ, ಯೋಜನೆ ಹಾಗೂ ಸಾಂಖ್ಯಿಕ ಸಚಿವರು.**

ಅ ಚಿಂತಾಮಣಿ ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟವು ಸುಮಾರು 1000 ಅಡಿಗಳಿಗೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಬಂದಿದೆ.

ಆ ಹಾಗಿದ್ದಲ್ಲಿ, ಈ ಕುರಿತು ದೀರ್ಘಕಾಲದ ಪರಿಹಾರವನ್ನು ಕಂಡುಕೊಳ್ಳಲು ಸರ್ಕಾರ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ;

ಸಣ್ಣ ನೀರಾವರಿ ಇಲಾಖೆಯು ನೇರವಾಗಿ ಅಂತರ್ಜಲ ಮಟ್ಟ ವೃದ್ಧಿಸುವ ಯೋಜನೆಗಳನ್ನು ಕೈಗೊಳ್ಳುವುದಿಲ್ಲ. ಆದರೆ, ಇಲಾಖೆಯು ಕೈಗೊಳ್ಳುವ ಯೋಜನೆಗಳಿಂದ ಪರೋಕ್ಷವಾಗಿ ಅಂತರ್ಜಲ ಅಭಿವೃದ್ಧಿಯಾಗುತ್ತದೆ.

ಇ ಮಳೆಗಾಲದಲ್ಲಿ ಹರಿಯುವ ನದಿಗಳ ಚೆಕ್ ಡ್ಯಾಂಗಳ ಅಳವಡಿಸುವುದರಿಂದ ಅಂತರ್ಜಲ ಮಟ್ಟವನ್ನು ವೃದ್ಧಿಸಲು ಹೆಚ್ಚು ಹೆಚ್ಚು ಚೆಕ್ ಡ್ಯಾಂಗಳನ್ನು ನಿರ್ಮಿಸಲು ಸರ್ಕಾರ ಯಾವ ಕ್ರಮವನ್ನು ಕೈಗೊಳ್ಳಲಾಗುವುದು (ವಿವರ ನೀಡುವುದು)?

ಚಿಂತಾಮಣಿ ತಾಲ್ಲೂಕಿನಲ್ಲಿ ಬುರುಡುಗುಂಟೆ, ಹೊಸಹೂಡ್ಯ, ಅಪ್ಪಸಾನಹಳ್ಳಿ, ಗುಂಡ್ಲುಹಳ್ಳ ಹಾಗೂ ಮಿಂಡಿಗಲ್ ಹತ್ತಿರ ಪಿಕಪ್ ನಿರ್ಮಾಣ ಕಾಮಗಾರಿಯನ್ನು ಹಾಗೂ ಕ್ಯಾಸಗೆರೆ ಹತ್ತಿರ ಡೈಕ್ ನಿರ್ಮಾಣ ಕಾಮಗಾರಿಯನ್ನು ಈಗಾಗಲೇ ಕೈಗೊಂಡಿದ್ದು, ಇವುಗಳ ಪೈಕಿ ಬುರುಡುಗುಂಟೆ, ಹೊಸಹುಡ್ಯ, ಮಿಂಡಿಗಲ್ ಹತ್ತಿರ

ಪಿಕಪ್ ನಿರ್ಮಾಣ ಹಾಗೂ ಕ್ಯಾಸಗೆರೆ ಹತ್ತಿರ ಡೈಕ್ ನಿರ್ಮಾಣ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಈ ಯೋಜನೆಗಳಿಂದ ಅಂತರ್ಜಲ ಅಭಿವೃದ್ಧಿಯಾಗುವುದು. 2008–09ನೇ ಸಾಲಿನಲ್ಲಿ ಇಲಾಖೆಗೆ ಲಭ್ಯವಾಗುವ ಅನುದಾನವನ್ನಾಧರಿಸಿ ಹೊಸ ಕಾಮಗಾರಿಗಳನ್ನು ಕೈಗೊಳ್ಳಲು ಪರಿಶೀಲಿಸಲಾಗುವುದು.

ಸದಸ್ಯರ ಹೆಸರು	:	**ಡಾ:ಸುಧಾಕರ್ ಎಂ.ಸಿ. (ಚಿಂತಾಮಣಿ)**
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	**(303)129**
ಉತ್ತರಿಸುವ ಸಚಿವರು	:	**ಮಾನ್ಯ ಜವಳಿ ಮತ್ತು ಯುವಜನ ಸೇವೆ ಸಚಿವರು (ಶ್ರೀ ಗೂಲಿಹಟ್ಟಿ ಡಿ.ಶೇಖರ್)**

ಅ) ಚಿಂತಾಮಣಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕತ್ತರಿಗುಪ್ಪೆ ಗ್ರಾಮ ಬಡ ನೇಕಾರರಿಗೆ ಅನ್ಯಾಯ, ಅವ್ಯವಹಾರ ನಡೆದಿರುವುದರ ಬಗ್ಗೆ ಸರ್ಕಾರಕ್ಕೆ ದೂರು ನೀಡಿರುವುದು ನಿಜವಲ್ಲವೇ;

ನಿಜ

ಆ) ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ (ವಿವರ ನೀಡುವುದು)

ಚಿಂತಾಮಣಿ ತಾಲ್ಲೂಕು ಕತ್ತರಿಗುಪ್ಪೆ ಗ್ರಾಮದಲ್ಲಿರುವ ಹತ್ತಿ ಕೈಮಗ್ಗ ನೇಕಾರರ ಉತ್ಪಾದನೆ ಮತ್ತು ಮಾರಾಟ ಸಹಕಾರ ಸಂಘ ನಿ., ಈ ಸಂಘಕ್ಕೆ ಕೇಂದ್ರ ಪುರಸ್ಕೃತ ವಸತಿ ಕಾರ್ಯಾಗಾರ ಯೋಜನೆಯಡಿ 2004–05 ನೇ ಸಾಲಿನಲ್ಲಿ ಬಿಡುಗಡೆ ಮಾಡಿದ್ದ ರೂ.9.80 ಲಕ್ಷಗಳ ಅನುದಾನವನ್ನು ಸಂಘದ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ದುರುಪಯೋಗಪಡಿಸಿಕೊಂಡಿರುವ ಬಗ್ಗೆ ದೂರಿದ್ದು, ಈ ಸಂಬಂಧ ಇವರ ಮೇಲೆ ಕೈಮಗ್ಗ ಮತ್ತು ಜವಳಿ ಇಲಾಖೆಯು ಕೋಲಾರ ಜಿಲ್ಲಾ ಕಚೇರಿಯಿಂದ ಜೆ.ಎಂ.ಎಫ್.ಸಿ. ನ್ಯಾಯಾಲಯ, ಚಿಂತಾಮಣಿ ಇಲ್ಲಿ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ.153/04 ಹೂಡಲಾಗಿದ್ದು ಪ್ರಕರಣ ನ್ಯಾಯಾಲಯದಲ್ಲಿರುತ್ತದೆ.